# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು,
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು –03**

**ಸಂಖ್ಯೆ: ವಿ1/ವಿ.ಸ.ಪ/ಮೌ.ನೋಂ/18/2021–22** **ದಿನಾಂಕ: 01/10/2021**

## ಸುತ್ತೋಲೆ

**ವಿಷಯ:–** ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಮೌಲ್ಯಮಾಪಕರ ನೋಂದಣಿ ಬಗ್ಗೆ.

******

ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನು ನವೆಂಬರ್/ಡಿಸೆಂಬರ್ ಮಾಹೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಅಭ್ಯರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸುವ ಮುನ್ನ ಮೌಲ್ಯಮಾಪಕರ ವಿವರಗಳನ್ನು ಆನ್‌ಲೈನ್ ಮೂಲಕ ಮಂಡಳಿಯ ಜಾಲತಾಣ www.sslc.karnataka.gov.in ನಲ್ಲಿ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ.

**ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಮೌಲ್ಯಮಾಪಕರ ನೋಂದಣಿಗೆ ಸಂಬಂಧಿಸಿದ ಸೂಚನೆಗಳು**

- ಮೌಲ್ಯಮಾಪಕರ ಆನ್‌ಲೈನ್ ನೋಂದಣಿಗಾಗಿ ಮಂಡಳಿಯ ಜಾಲತಾಣ www.sslc.karnataka.gov.in ನಲ್ಲಿ ಅವಕಾಶ ಕಲ್ಪಿಸಿದೆ.
- **ನೋಂದಣಿಯ ಹಂತಗಳು**
  1. ಮೌಲ್ಯಮಾಪಕರ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದು.
  2. ಕ.ಪ್ರೌ.ಶಿ.ಪ. ಮಂಡಳಿಯಿಂದ ಮೌಲ್ಯಮಾಪಕರ ಅರ್ಜಿ ಅನುಮೋದನೆ
  3. ಮೌಲ್ಯಮಾಪಕರ ನೋಂದಣಿ ಶುಲ್ಕ ಪಾವತಿಸುವುದು
  4. ಮೌಲ್ಯಮಾಪಕರ ನೋಂದಣಿ ಅರ್ಜಿ ಡೌನ್‌ಮಾಡಿಕೊಳ್ಳುವುದು

### 1. ಮೌಲ್ಯಮಾಪಕರ ಆನ್‌ಲೈನ್ ನೋಂದಣಿ:

ಆನ್‌ಲೈನ್ ಅರ್ಜಿಯಲ್ಲಿ ಮೌಲ್ಯಮಾಪಕರ ಹೆಸರು, ಮೌಲ್ಯಮಾಪನ ಮಾಡುವ ವಿಷಯ, ತಂದೆಯ ಹೆಸರು, ಜನ್ಮದಿನಾಂಕ, ದೈಹಿಕ ಸ್ಥಿತಿ, ಬೋಧನಾನುಭವ, ಮೌಲ್ಯಮಾಪನದ ಅನುಭವ, ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ವಿಳಾಸ, ಭಾವಚಿತ್ರ, ಸಹಿ, ವಿದ್ಯಾರ್ಹತೆಯ ಪ್ರಮಾಣಪತ್ರ, ಕ.ಪ್ರೌ.ಶಿ.ಪ.ಮಂಡಳಿಯ ಮೌಲ್ಯಮಾಪಕರ ನೋಂದಣಿ ಸಂಖ್ಯೆ, ತಮ್ಮ ಬಳಿ ಅಭ್ಯಾಸಮಾಡಿ ಪ್ರಸ್ತುತ ಸಾಲಿನ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಸಂಖ್ಯೆ ಇತ್ಯಾದಿ ಮಾಹಿತಿಗಳನ್ನು ನಮೂದಿಸಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ನೋಂದಣಿ ಮಾಡಿಕೊಂಡ ನಂತರ ನೀಡಲಾಗುವ ಮೌಲ್ಯಮಾಪಕರ ಹೊಸ ಸಂಕೇತವನ್ನು ಮುಂದಿನ ಪರೀಕ್ಷಾ ಪ್ರಕ್ರಿಯೆಗಳಿಗೆ ಬಳಸಿಕೊಳ್ಳುವುದು.

### 2. ಕ.ಪ್ರೌ.ಶಿ.ಪ.ಮಂಡಳಿಯಿಂದ ಮೌಲ್ಯಮಾಪಕರ ಅರ್ಜಿ ಅನುಮೋದನೆ:

ಮೌಲ್ಯಮಾಪಕರು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡ ನಂತರ ಸದರಿ ಅರ್ಜಿಗಳನ್ನು ಮಂಡಳಿಯ ಹಂತದಲ್ಲಿ ಪರಿಶೀಲಿಸಿ ಅನುಮೋದನೆ ನೀಡಲಾಗುವುದು. ಒಂದು ವೇಳೆ ಮೌಲ್ಯಮಾಪಕರ ವಿವರಗಳಲ್ಲಿ ವ್ಯತ್ಯಾಸ/ಅಸ್ಪಷ್ಟತೆ ಇದ್ದರೆ ನೋಂದಣಿಯ ಅರ್ಜಿಯನ್ನು ಮಂಡಳಿಯ ಹಂತದಲ್ಲಿ ತಿರಸ್ಕರಿಸಲಾಗುವುದು. ಅರ್ಜಿಯ ಅನುಮೋದನೆ/ತಿರಸ್ಕೃತ ಆಗಿರುವ ಬಗ್ಗೆ ಮೌಲ್ಯಮಾಪಕರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ರವಾನಿಸಲಾಗುವುದು.

3. **ಮೌಲ್ಯಮಾಪಕರ ನೋಂದಣಿ ಶುಲ್ಕ ಪಾವತಿಸುವುದು:**

ಮೌಲ್ಯಮಾಪಕರು ಈಗಾಗಲೇ ಮಂಡಳಿಯಲ್ಲಿ ಆಫ್‌ಲೈನ್ ವ್ಯವಸ್ಥೆಯಲ್ಲಿ ನೋಂದಣಿ ಮಾಡಿಕೊಂಡಿದ್ದರೆ ಮೌಲ್ಯಮಾಪಕರ ನೋಂದಣಿ ಶುಲ್ಕ ಪಾವತಿಸುವಂತಿಲ್ಲ.

ಹೊಸದಾಗಿ ನೋಂದಣಿ ಮಾಡಿಕೊಳ್ಳುವ ಮೌಲ್ಯಮಾಪಕರು ನೋಂದಣಿ ಶುಲ್ಕ ರೂ. 210/- (ಎರಡುನೂರ ಹತ್ತು) ಗಳನ್ನು ಮಂಡಳಿಯ ಜಾಲತಾಣದಲ್ಲಿ ಲಭ್ಯಗೊಳಿಸಿರುವ ಅರ್ಜಿಯಲ್ಲಿ ನೀಡಿರುವ ಆನ್‌ಲೈನ್ ಪೇಮೆಂಟ್ ಆಯ್ಕೆ ಬಳಸಿ ಪಾವತಿಸಬೇಕಾಗಿರುತ್ತದೆ.

4. **ಮೌಲ್ಯಮಾಪಕರ ನೋಂದಣಿ ಅರ್ಜಿ ಡೌನ್‌ಮಾಡಿಕೊಳ್ಳುವುದು:**

ಮೌಲ್ಯಮಾಪಕರ ನೋಂದಣಿ, ಅನುಮೋದನೆ ಹಾಗೂ ಶುಲ್ಕ ಪಾವತಿಯ ನಂತರ ಮಂಡಳಿಯ ಜಾಲತಾಣದಲ್ಲಿ ಲಭ್ಯಗೊಳಿಸಿರುವ ಡೌನ್‌ಲೋಡ್ ಅಪ್ಲಿಕೇಶನ್ ಆಯ್ಕೆ ಬಳಸಿ ಮೌಲ್ಯಮಾಪಕರು ನೋಂದಣಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಒಂದು ವೇಳೆ ಅರ್ಜಿಯ ಮಾಹಿತಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ಮಂಡಳಿಯನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳುವುದು.

ಮೌಲ್ಯಮಾಪಕರು ಕಡ್ಡಾಯವಾಗಿ ಆನ್‌ಲೈನ್ ನೋಂದಣಿಯಲ್ಲಿ ಜನರೇಟ್ ಆಗುವ ಮೌಲ್ಯಮಾಪಕರ ಹೊಸ ಸಂಕೇತವನ್ನು ತಮ್ಮ ಬಳಿ ಅಭ್ಯಾಸ ಮಾಡುತ್ತಿದ್ದು, ಪ್ರಸಕ್ತ ಸಾಲಿನ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ನೀಡುವುದು. ಅಭ್ಯರ್ಥಿಗಳು ಮೌಲ್ಯಮಾಪಕರ ಹೊಸ ನೋಂದಣಿ ಸಂಖ್ಯೆಯನ್ನು ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದು ಮಾಡಬೇಕಾಗಿರುತ್ತದೆ. ಇಲ್ಲವಾದಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ.

ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳ ಮೌಲ್ಯಮಾಪಕರ ನೋಂದಣಿಗೆ ಸಂಬಂಧಿಸಿದಂತೆ ವಿವರವಾದ ಫ್ಲೋಚಾರ್ಟ್ ಅನ್ನು ಮಂಡಳಿಯ ಜಾಲತಾಣದಲ್ಲಿ ಲಭ್ಯಮಾಡಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ 080-23360073 ಕ್ಕೆ ಸಂಪರ್ಕಿಸಬಹುದಾಗಿದೆ.

4/10/2021

[ಎಸ್. ಗೀತಾ]
ನಿರ್ದೇಶಕರು
ಇತರೆ ಪರೀಕ್ಷೆಗಳು

ಪ್ರತಿಯನ್ನು ಗೌರವ ಪೂರ್ವಕವಾಗಿ

1. ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಕಛೇರಿ ಪ್ರತಿ.

**KARNATAKA SECONDARY EDUCATION EXAMINATION BOARD (OTHER EXAMS)**
**6th Cross, Malleshwaram, Bengaluru – 560 003**

---

**FLOW CHART FOR ONLINE EVALUATOR'S REGISTRATION - MUSIC EXAMINATION.**

www.kseeb.karnataka.gov.in/musiconline

↓

Enter Evaluator's details
(Name, Exam, DOB, Qualification.......)

↓

Upload Evaluator's Photo
(60-80kb size, in jpeg format)

↓

Upload Evaluator's Signature
(20-50kb size, in jpeg format)

↓

Upload Evaluator's Qualification Certificate
(Upto 1 MB Size)

↓

Upload Evaluator's Address prof
(Upto 1 MB Size)

↓

Click on check Box for Declaration

↓

**Click on Save and Get KSEEB Number**

↓

**Print**

**Note:**

1.After Approval from KSEEB, OTEREXAMS, MUSIC SECTION, follow the below steps

- Make payment (ONLY FOR NEW EVALUATOR'S REGISTRATION).
- Download Aplication